# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 921
2. ಮಾನ್ಯ ಸದಸ್ಯರ ಹೆಸರು : ಶ್ರೀ ಕೆ.ಹರೀಶ್ ಕುಮಾರ್(ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 24-02-2022

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಗೃಹ ಇಲಾಖೆಯಲ್ಲಿ ಅನುಕಂಪದ ಆಧಾರದ ನೆಲೆಯಲ್ಲಿ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು;</td><td>ಗೃಹ ಇಲಾಖೆಯಲ್ಲಿ ಅನುಕಂಪದ ಆಧಾರದ ನೆಲೆಯಲ್ಲಿ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಈ ಕೆಳಕಂಡಂತಿದೆ.
<table>
<tr><th rowspan="2">ಇಲಾಖೆ</th><th colspan="5">ವರ್ಷ</th></tr>
<tr><th>2017-18</th><th>2018-19</th><th>2019-20</th><th>2020-2021</th><th>2021-2022</th></tr>
<tr><td>ಪೊಲೀಸ್ ಇಲಾಖೆ</td><td>255</td><td>219</td><td>283</td><td>309</td><td>34</td></tr>
<tr><td>ಕಾರಾಗೃಹ ಮತ್ತು ಸುಧಾರಣೆ ಸೇವೆ ಇಲಾಖೆ</td><td>01</td><td>02</td><td>03</td><td>06</td><td>05</td></tr>
<tr><td>ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ</td><td>25</td><td>25</td><td>15</td><td>27</td><td>28</td></tr>
<tr><td>ಗೃಹರಕ್ಷಕ ಹಾಗೂ ಪೌರರಕ್ಷಣಾ ಇಲಾಖೆ</td><td>06</td><td>-</td><td>04</td><td>01</td><td>-</td></tr>
<tr><td>ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ</td><td>-</td><td>-</td><td>-</td><td>-</td><td>-</td></tr>
<tr><td>ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ</td><td>04</td><td>04</td><td>02</td><td>03</td><td>04</td></tr>
<tr><td>ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ</td><td>-</td><td>-</td><td>04</td><td>-</td><td>02</td></tr>
<tr><td>ಒಟ್ಟು</td><td>291</td><td>250</td><td>311</td><td>346</td><td>73</td></tr>
</table>
</td></tr>
<tr><td>ಆ)</td><td>ಪೊಲೀಸ್ ಇಲಾಖೆಯು ಅನುಕಂಪದ ಆಧಾರದ ಉದ್ಯೋಗದ ಭರವಸೆ ನೀಡಿದ್ದರೂ, ಉದ್ಯೋಗ ನೀಡುವಲ್ಲಿ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತಂತೆ ಸರ್ಕಾರವು ತೆಗೆದುಕೊಂಡು ಕ್ರಮವೇನು; (ವಿಸ್ತೃತವಾದ ಮಾಹಿತಿ ನೀಡುವುದು)</td><td><u>ಪೊಲೀಸ್ ಇಲಾಖೆ:</u><br>ಈ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವಾಗ ಮೃತರಾದ ಅಧಿಕಾರಿ/ಸಿಬ್ಬಂದಿಗಳ ಅವಲಂಬಿತ ಕುಟುಂಬ ಸದಸ್ಯರು ಅನುಕಂಪದ ಆಧಾರದ ನೇಮಕಾತಿ ಕೋರಿ ಸಲ್ಲಿಸುತ್ತಿರುವ ಮನವಿಗಳನ್ನು ಯಾವುದೇ ವಿಳಂಬಕ್ಕೆ ಆಸ್ಪದ ನೀಡದೆ ಕೆ.ಸಿ.ಎಸ್.(ಅನುಕಂಪದ ಆಧಾರದ ನೇಮಕಾತಿ ನಿಯಮಗಳು-1996 ಹಾಗೂ ಕೆ.ಸಿ.ಎಸ್ (ಸಾಮಾನ್ಯ ನೇಮಕಾತಿ) ನಿಯಮಗಳು-1977 ರ ಅನುಸಾರ ಪರಿಶೀಲಿಸಿ ಅರ್ಹತೆಯ ಅನುಸಾರ ಅರ್ಹರಾಗಿರುವ ಪ್ರಕರಣಗಳಲ್ಲಿ ಇಲಾಖೆಯಲ್ಲಿ ಗ್ರೂಪ್ ಸಿ ಮತ್ತು ಡಿ ದರ್ಜೆಯ ರಿಕ್ತಸ್ಥಾನಗಳಿಗೆ ಹಂಚಿಕೆ ಮಾಡಿ ನೇಮಕಾತಿ ಆದೇಶಗಳನ್ನು ನೀಡಲಾಗುತ್ತಿದೆ. ಅಲ್ಲದೆ ಇಲಾಖೆಯಲ್ಲಿ ಗ್ರೂಪ್-ಸಿ ಮತ್ತು ಡಿ ದರ್ಜೆಯ ರಿಕ್ತಸ್ಥಾನಗಳು ಲಭ್ಯವಿಲ್ಲದಿದ್ದಾಗ ಅರ್ಜಿದಾರರ ನೇಮಕಾತಿ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ಪ್ರಾದೇಶಿಕ ಆಯುಕ್ತರುಗಳಿಗೆ ಸಹಾ ಶಿಫಾರಸ್ಸು ಮಾಡಿ ಕಳುಹಿಸಲಾಗುತ್ತದೆ.</td></tr>
</table>

..2

| | | |
|---|---|---|
| | | ಆದಾಗ್ಯೂ ನಿಯಮಗಳಲ್ಲಿ ನಿಗಧಿಪಡಿಸಿರುವ ನಮೂನೆಯಲ್ಲಿ ಅರ್ಜಿಗಳನ್ನು ಸಲ್ಲಿಸಿದ ಪ್ರಯುಕ್ತ ಹಾಗೂ ಅನುಕಂಪದ ನೇಮಕಾತಿ ಪರಿಗಣನೆಗೆ ಅಗತ್ಯ ದಾಖಲಾತಿ ಸಲ್ಲಿಸದ ಪ್ರಯುಕ್ತ (ಸಂಪೂರ್ಣ ಮಾಹಿತಿ) ಹಾಗೂ ಈ ಕುರಿತು ದಾಖಲಾತಿಗಳನ್ನು ಪಡೆಯುವ ಪತ್ರ ವ್ಯವಹಾರಗಳಿಂದಾಗಿ ಉದ್ಯೋಗ ನೀಡುವಲ್ಲಿ ವಿಳಂಬವಾಗುತ್ತದೆ. ಅರ್ಜಿದಾರರಿಗೆ ಅರ್ಜಿಯನ್ನು ಸಲ್ಲಿಸಲು ನಿಗಿದಿಪಡಿಸಿರುವ ಕಾಲಾವಧಿ, ನಮೂನೆ ಇತ್ಯಾದಿ ಸಂಪೂರ್ಣ ಮಾಹಿತಿ ನೀಡಿ ದಾಖಾತಿಗಳನ್ನು ಒದಗಿಸುವಂತೆ ಸೂಚಿಸಿ ಮಾರ್ಗದರ್ಶನ ನೀಡುವಂತೆ ಸಂಬಂಧಪಟ್ಟ ಘಟಕಾಧಿಕಾರಿಗಳಿಗೆ ಚೆಕ್‌ಲಿಸ್ಟ್‌ಗಳನ್ನು ನಿಗಧಿಪಡಿಸಿ ಸೂಚನೆಗಳನ್ನು ಆಗಿಂದಾಗ್ಗೆ ನಿರಂತರವಾಗಿ ನೀಡಲಾಗುತ್ತಿದೆ. |

**ಸಂಖ್ಯೆ: ಒಇ 23 ಎಸ್ ಎ ಎಸ್ ಹೆಚ್ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು